**ದಿನಾಂಕಃ 31-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ನಂ. 1 ರಿಂದ 6 ರವರ ಪರ ಶ್ರೀ ಎಮ್ ಹೆಚ್ ಎ ವಕೀಲರಿಂದಃ**

ನಾನು ಶಾಲೆ ಕಲಿತಿಲ್ಲ. ಇಂಗ್ಲಿಷ್ ಓದು ಬರಹ ಬರುವುದಿಲ್ಲ ಎಂದರೆ ಸರಿ. ಸಹಿ ಮಾಡಲು ಮಾತ್ರ ಬರುತ್ತದೆ ಎಂದರೆ ಸರಿ. ಮೃತ ದೇವಪ್ಪ ನಮ್ಮ ಊರು ಓಜನಳ್ಳಿಗೆ ಮಗಳ ಹತ್ತಿರ ಬರುತ್ತಿದ್ದ ಹೀಗಾಗಿ ಆತನ ಪರಿಚಯ ಆಗಿತ್ತು. ಆತನಿಗೆ ಓದು ಬರಹ ಬರುತ್ತಿತ್ತು.

2. ಆತನ ಹಣಕಾಸಿನ ಅಡಚಣೆ ಏನು ಅಂತಾ ನನಗೆ ಗೊತ್ತಿಲ್ಲ. ಹೊಲ ಕೊಡುವುದಿದೆ ಅಂತಾ ಅಷ್ಟೆ ಹೇಳಿದ. ಈ ದಾವೆಯಲ್ಲಿರುವ ದಿನಾಂಕಃ 24-12-2012 ರ ಕರಾರು ಪತ್ರದ ಪೂರ್ವ ಇನ್ನೊಂದು ಕರಾರು ಪತ್ರ ದಿಃ- 22-02-2010 ರಂದು ಇದೇ ಆಸ್ತಿ ಸಂಬಂಧದಲ್ಲಿ ಮೃತ ದೇವಪ್ಪನ ಕಡೆಯಿಂದ ಮಾಡಿಸಿಕೊಂಡಿದ್ದೆ ಎಂದರೆ ಸರಿ. ಮೊದಲಿನ ಕರಾರು ಪತ್ರ 6,00,000/- ರೂ ಆಗಿತ್ತು, 50,000/- ರೂ ಹಣ ಆತ ಪಡೆದಿದ್ದ. ಈ ಕರಾರು ಪತ್ರ ಸಹ 6,00,000/-ರೂಪಾಯಿಗೆ ಆಗಿದೆ, 5,10,000/- ಹಣ ಪಡೆದಿದ್ದು ಇರುತ್ತದೆ.

3. ಪಿಜಿಬಿ ಬ್ಯಾಂಕ್ ನ ಸಾಲ ಕಟ್ಟುವ ಸಲುವಾಗಿ 5,30,000/- ರೂಪಾಯಿ ಮೊದಲು ಕರಾರು ಆಗಿತ್ತು ಎಂದರೆ ಸರಿಯಲ್ಲ. 2010 ರಲ್ಲಿ ಮಾಡಿದ್ದು ಸಾಲ ಪತ್ರ, ಆದರೂ ಅದನ್ನು ಖರೀದಿ ಕರಾರು ಪತ್ರದ ಶೈಲಿಯಲ್ಲಿ ಬರೆಯಿಸಿದ್ದೆ ಎಂದರೆ ಸರಿಯಲ್ಲ. ಮೊದಲಿನ ಕರಾರು ಪತ್ರ ಆದ ನಂತರ ಮೃತ ದೇವಪ್ಪ ಇನ್ನೂ ಹಣ ಹೆಚ್ಚು ಬೇಕು ಅಂದ ಅದಕ್ಕಾಗಿ ಅದನ್ನು ರದ್ದು ಮಾಡಿ ಈಗಿರುವ ನಿಪಿ 1 ರ ಕರಾರು ಪತ್ರ ಮಾಡಲಾಯಿತು. 2010 ರಲ್ಲಿ ಮೃತ ದೇವಪ್ಪನಿಂದ ಕರಾರು ಪತ್ರ ಬರೆಯಿಸಿಕೊಂಡ ಕುರಿತು ಮತ್ತು ಈ ನಿಪಿ 1 ಕರಾರು ಪತ್ರ ಬರೆಯುವ ಕಾಲಕ್ಕೆ ರದ್ದು ಪಡಿಸಿದ ಕುರಿತು ಹೇಳಿಲ್ಲ ಎಂದರೆ ಸರಿ.

4. ಈ ಕರಾರು ಪತ್ರ ಬರೆಯುವ ಕಾಲಕ್ಕೆ ದೇವಪ್ಪನ ವಯಸ್ಸು 60 ರಿಂದ 70 ಇತ್ತು. ಕರಾರು ಪತ್ರದಲ್ಲಿ ಆತನ ವಯಸ್ಸು ಎಷ್ಟು ಬರೆದಿದ್ದಾರೆ ನೆನಪಿಲ್ಲ. ಮೊದಲ ಸಾಲ ತೀರಿಸಲು ಆಗದೇ ಇರುವ ಕಾರಣ ದೇವಪ್ಪ ನನ್ನನ್ನು ಸಬ್ ರಿಜಿಸ್ಟರ್ ಕಚೇರಿಗೆ ಕರೆದಿದ್ದರು ಎನ್ನುವುದು ಸರಿಯಲ್ಲ. ಮೊದಲಿನ

ಕರಾರು ಪತ್ರ ರದ್ದತಿಗೆ ಕರೆದಾಗ ನಾನು ನಿಪಿ 1 ರಂತೆ ಈ ಕರಾರು ಪತ್ರ ಬರೆಯಿಸಿಕೊಂಡೆ ಎಂದರೆ ಸರಿಯಲ್ಲ. ಅವನು ಹಣ ಹೆಚ್ಚು ಕೇಳಿದ್ದಕ್ಕಾಗಿ ಈ ಕರಾರು ಪತ್ರ ಬರೆಯಿಸಿಕೊಂಡೆ ಎನ್ನುತ್ತಾರೆ. ಹೆಚ್ಚಿಗೆ ಹಣ ಕೇಳಿದಕ್ಕಾಗಿ 2ನೇ ಕರಾರು ಪತ್ರ ಬರೆಯಲಾಯಿತು ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿಲ್ಲ ಎಂದರೆ ಸರಿ.

5. ಈ ಕರಾರು ಪತ್ರ ಬರೆದ ಕಾಲಕ್ಕೆ ದೇವಪ್ಪನಿಗೆ 75 ವರ್ಷ ವಯಸ್ಸು ಆಗಿತ್ತು ಎಂದರೆ ಸರಿ. ಅವನು ಸರಿಯಾಗಿ ಕಣ್ಣು ಕಾಣುತ್ತಿರಲಿಲ್ಲಾ ಎಂದರೆ ಸರಿಯಲ್ಲ. ಸದರಿ ಆಸ್ತಿ ದೇವಪ್ಪನಿಗೆ ಹೇಗೆ ಬಂದಿತ್ತು ಎಂದು ನನಗೆ ಮಾಹಿತಿ ಇಲ್ಲ. ಅದು ಆತನ ಪಿತ್ರಾರ್ಜಿತ ಆಸ್ತಿ ಎಂದರೆ ಇರಬಹುದು ಗೊತ್ತಿಲ್ಲ. ಅದು ಒಟ್ಟು ಜಮೀನು 19 ಎಕರೆ 14 ಗುಂಟೆ ಆ ಪೈಕಿ 2 ಎಕರೆ 34 ಗುಂಟೆ ಬರೆಯಿಸಿಕೊಂಡಿದ್ದೇನೆ. ಈ ಕರಾರು ಪತ್ರವನ್ನು ಮಂಗಳಪ್ಪರವರ ಕಡೆ ಬರೆಯಿಸಲಾಗಿದೆ.

6. 5,10,000/- ರೂಪಾಯಿ ಅಡ್ವಾನ್ಸ ಕೊಟ್ಟಿದ್ದೇನೆ. ಸಂಪೂರ್ಣ ಹಣ ನಗದಾಗಿ ನೀಡಿದ್ದೇನೆ. ಸದರಿ ಹಣ ದುಡಿದು ಗಳಿಸಿದ್ದೆ. ನಾನು ಹನಿನೀರಾವರಿ ಪಿಟ್ಟಿಂಗ್ ಕೆಲಸ ಮಾಡುತ್ತೇನೆ ಅದರಲ್ಲಿ ನನಗೆ ಆದಾಯ ಬಂದಿತ್ತು ಮತ್ತು ಹೊಲದಲ್ಲೂ ಮಾಡುತ್ತೇನೆ. ನಾನು ಡ್ರಿಪ್ ಏಜೆನ್ಸಿ ಮಾಡುತ್ತೇನೆ ಅಂಗಡಿ ಇಲ್ಲ. ನಾನು ತೆರಿಗೆ ಪಾವತಿದಾರನಲ್ಲ ಎಂದರೆ ಸರಿ.

7. ಖರೀದಿ ಪತ್ರ ಮಾಡಿಕೊಡಲು ಕೇಳಿ ದೇವಪ್ಪನನ್ನು ದಿಃ-18-12-2012 ರಂದು ಬೇಟ್ಟಿ ಆಗಿದ್ದೆ. ಅದಕ್ಕಿಂತಲೂ ಪೂರ್ವ ಸಹ ಬೇಟ್ಟಿ ಆಗಿದ್ದೆ. ದೇವಪ್ಪ ಯಾವಾಗ ಮರಣ ಹೊಂದಿದರು ಅಂತಾ ನೆನಪಿಲ್ಲ. ಆತನ ಮರಣದ ವಿಚಾರ 3ನೇ ದಿನಕ್ಕೆ ಗೊತ್ತಾಯಿತು. ಪ್ರತಿವಾದಿ ನಂ. 1, 3 ರವರ ಹೆಸರಿಗೆ ಯಾವಾಗ ವಾರಸಾ ಆಯಿತು ಎಂದು ಗೊತ್ತಿಲ್ಲ. ಅವರು ಮಕ್ಕಳು ತಾಯಿ ಹೆಸರಿಗೆ ಮಾಡಿ ನಮಗೆ ಮಾಡಿಕೊಡುತ್ತೇವೆ ಅಂತಾ ಹೇಳಿದ್ದರು. ವರ್ಗಾವಣೆ ಆದ ದಿನಾಂಕ ಮಾಹಿತಿ ಇಲ್ಲ ಎಂದರೆ ಸರಿ.

8. ಅವರದು ಪಿಕೆಜಿಬಿ ಬ್ಯಾಂಕಿನಲ್ಲಿ 5,00,000/- ರೂಪಾಯಿ ಸಾಲ ಇತ್ತು ಎಂದರೆ ಸರಿ. ಖರೀದಿ ವಚನ ಪತ್ರ ಬರೆಯಿಸಿಕೊಂಡಾಗ ಇದ್ದ ಪಹಣಿ ಪತ್ರಿಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನಂ. 1 ಹೆಸರಿನ ಪಹಣಿ ಪತ್ರಿಕೆ ಹಾಜರುಪಡಿಸಿದ್ದೇನೆ ಎಂದರೆ ಸರಿ. ದೇವಪ್ಪನ ಹೆಸರಿನ ಪಹಣಿ ಪತ್ರಿಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ,

9. ದೇವಪ್ಪನಿಗೆ ಶಿವಮ್ಮ ಮತ್ತು ಹಳ್ಳಮ್ಮ ಎಂಬ ಇಬ್ಬರು ಹೆಂಡತಿಯರು ಎಂದರೆ ಸರಿ. ಶಿವಮ್ಮನಿಗೆ ಮೂರು ಮಕ್ಕಳು 1) ಮಂಜುನಾಥ 2) ಗಂಗಮ್ಮ 3) ನೀಲಕಂಠಪ್ಪ @ ರಾಮಪ್ಪ ಎಂದರೆ ಸರಿ. ಹಳ್ಳವ್ವನಿಗೆ 3 ಜನ ಮಕ್ಕಳು 1) ಗಣೇಶ, 2) ಬಾರತಿ 3) ಲಕ್ಷ್ಮೀಕಾಂತ ಎಂದರೆ ಸರಿ. ಖರೀದಿ ಪತ್ರಕ್ಕೆ ಬರೆದುಕೊಡಲು ನಿರ್ದಿಷ್ಟ ದಿನಾಂಕ ಬರೆಯಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಆಕಾರ ಬಂದ್ ಟ್ಯಾಲಿ ಆಗಿರಲಿಲ್ಲಾ ಅದು ಸರಿಯಾದ ನಂತರ ಮಾಡಿಕೊಡುತ್ತೇನೆ ಎಂದಿದ್ದರು. ಈ ವಿಷಯ ಅಗ್ರಿಮೆಂಟ್ ಆಫ್ ಸೇಲ್ ನಲ್ಲಿ ಬರೆಯಿಸಿಲ್ಲಾ.

10. ಫಾರಂ ನಂ. 10 ಮಾಡದೇ ಇದ್ದ ಕಾರಣ ಈ ದಾವಾ ಹಾಕಲು 6 ವರ್ಷ ವಿಳಂಬ ಮಾಡಿದೆ. ಆ ವಿಷಯ ಸಾಕ್ಷಿಯಲ್ಲಿ ಹೇಳಿ ಬರೆಯಿಸಿಲ್ಲಾ ಎಂದರೆ ಸರಿ. ದೇವಪ್ಪ ಖರೀದಿ ವಚನ ಪತ್ರ ಬರೆದುಕೊಟ್ಟ ವಿಷಯ ನಾನು ಸ್ವತಃ ಹೇಳಿದ್ದೇನೆ ನನ್ನೊಂದಿಗೆ ಮನೆಯಲ್ಲಿ ಆತನ ಹೆಂಡತಿ ಮಕ್ಕಳು ಇದ್ದರು, ಗವಿಸಿದ್ದಪ್ಪ, ಶಿವಕುಮಾರ, ಮಂಜುನಾಥ ಎಲ್ಲಾ ಹಿರಿಯರು ಇದ್ದರು. ಆದರೆ ಹೋದ ದಿನಾಂಕ ನೆನಪಿಲ್ಲ. ಕೇಸು ಹಾಕುವ ಪೂರ್ವ ಪ್ರತಿವಾದಿಗಳಿಗೆ ನೊಟಿಸ್ಸು ಕೊಟ್ಟಿದ್ದೇನೆ. ದಿನಾಂಕ ನೆನಪಿಲ್ಲ. ಡಿಎಮ್ ಪೂಜಾರ ವಕೀಲರ ಮೂಲಕ ಕೊಟ್ಟಿದ್ದೆ. ಆ ನೊಟಿಸ್ಸು ಪ್ರತಿ ಹಾಜರುಪಡಿಸಿಲ್ಲ ಎಂದರೆ ಸರಿ.

11. ದೇವಪ್ಪನ ವಾರಸುದಾರರಾದ ಭಾರತಿ ಮತ್ತು ಗಂಗಮ್ಮ ಇವರನ್ನು ಈ ಪ್ರಕರಣದಲ್ಲಿ ಪಾರ್ಟಿ ಮಾಡಿಲ್ಲ ಎಂದರೆ ಸರಿ. ಈ ಕರಾರು ಪತ್ರದ ವಿಷಯ ಸದ್ಯದ ಪ್ರತಿವಾದಿಗಳಿಗೆ ಗೊತ್ತಿರಲಿಲ್ಲಾ ಎಂದರೆ ಸರಿಯಲ್ಲ. ಮನೆಯ ಎಲ್ಲಾ ಸದಸ್ಯರಿಗೂ ಗೊತ್ತಿತ್ತು. ಆತನಿಗೆ ಆತನಿಗೆ ಕಣ್ಣು ಕಾಣುತ್ತಿರಲಿಲ್ಲಾ

ಮತ್ತು ಆರೋಗ್ಯ ಸರಿಯಿರಲಿಲ್ಲಾ ಎಂದರೆ ಸರಿಯಲ್ಲ. ಅದರ ದುರುಪಯೊಗ ಪಡಿಸಿಕೋಂಡು ನಿಪಿ 1 ರಂತೆ ಕರಾರು ಪತ್ರ ಬರೆಯಿಸಿಕೊಂಡೆ ಎಂದರೆ ಸರಿಯಲ್ಲ.

12. ಜಮೀನಿನ ಮೇಲೆ ಸಾಲ ಇದುದ್ದರಿಂದ ಪ್ರತಿವಾದಿ ನಂ. 7 ಇವರಿಗೆ ಪ್ರತಿವಾದಿ ನಂ. 1 ಮತ್ತು 3 ದಿಃ- 23-09-2019 ರಂದು ಮಾರಿದ್ದಾರೆ ಎಂದರೆ ಸರಿಯಲ್ಲ. ದಿಃ- 25-10-2019 ಕ್ಕೆ ನಾನು ಈ ದಾವೆ ದಾಖಲು ಮಾಡಿದೆ ಎಂದರೆ ಸರಿ. ಪಿಕೆಜಿಬಿ ಬ್ಯಾಂಕಿನ ಸಾಲ ತೀರಿಸಲು ಪ್ರತಿವಾದಿ ನಂ. 1 ಮತ್ತು 3 ಈ ಜಮೀನು ಮಾರಿದರು ಎಂದರೆ ಗೊತ್ತಿಲ್ಲ. ಪ್ರತಿವಾದಿಯರು ವಾರಸಾ ಮಾಡಿಕೊಳ್ಳಲು ನಾನು ತಕರಾರು ಮಾಡಿಲ್ಲ ಎಂದರೆ ಸರಿ. ಏಕೆಂದರೆ ನಾನು ತಕರಾರು ಹಾಕಿದರು ಸಹ ಅದು ನನ್ನ ಹೆಸರಿಗೆ ಬರುವುದಿಲ್ಲ, ಅವರು ನಮ್ಮ ತಾಯಿ ಹೆಸರಿಗೆ ಮಾಡಿ ಖರೀದಿ ಕೊಡುತ್ತೇವೆ ಎಂದಿದ್ದರು ಅದಕ್ಕಾಗಿ ಸುಮ್ಮನಾದೆ ಎನ್ನುತ್ತಾರೆ. ಪ್ರತಿವಾದಿ ನಂ. 1 ರಿಂದ 6 ರವರನ್ನು ನಾನು ಕೇಳಿಲ್ಲ ಎಂದರೆ ಸರಿಯಲ್ಲ.

13. ನಿಪಿ 1 ಸೃಷ್ಟಿ ಮಾಡಿದ್ದು ಎಂದರೆ ಸರಿಯಲ್ಲ. ಈ ವಿಷಯ ಪ್ರತಿವಾದಿಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನಂ. 1 ಮತ್ತು 3 ಪ್ರತಿವಾದಿ ನಂ. 7 ಇವರಿಗೆ ಮಾರಾಟ ಮಾಡಿದ ವಿಷಯ ನಾನು ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ. ಅದು ಗೊತ್ತಾದ ತಕ್ಷಣ ಈ ಕೇಸು ಹಾಕಿದ್ದೇನೆ. ಸಾಕ್ಷಿ ಮುಂದುವರೆದು ಪ್ರತಿವಾದಿಯರು ಹೊಡೆಯುತ್ತೇವೆ ಕೊಲೆ ಮಾಡುತ್ತೇವೆ ಎಂದರು ಅದಕ್ಕಾಗಿ ಸಮ್ಮನಾದೆ. ನಾನು ಆಗ ಪೊಲೀಸ್ ಠಾಣೆಗೆ ಹೋಗಿದ್ದೆ ಪ್ರತಿವಾದಿಯರು ಅಲ್ಲಿ ಮ್ಯಾನೇಜ್ ಮಾಡಿದರು. ದೇವಪ್ಪನಿಗೆ ಈ ಆಸ್ತಿ ಮಾರಾಟ ಮಾಡುವ ಹಕ್ಕು ಇರಲಿಲ್ಲಾ ಎಂದರೆ ಗೊತ್ತಿಲ್ಲ.

14. ಪ್ರತಿವಾದಿಯರ ಸಹಿ ನಿಪಿ 1 ಕ್ಕೆ ಇಲ್ಲ ಎಂದರೆ ಸರಿ. ಹಳೆ ಕರಾರು ಪತ್ರ ರದ್ದು ಮಾಡಲು ಹೋಗಿ ಹೊಸ ಕರಾರು ಪತ್ರ ಸೃಷ್ಟಿ ಮಾಡಿದೆ ಎಂದರೆ ಸರಿಯಲ್ಲ. ನಮ್ಮಿಂದ ಹಣ ಪಡೆದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನಂ. 7 ಹಣ ಪಡೆದು ಮಾರಿದ್ದಾರೆ ಎಂದರೆ ಗೊತ್ತಿಲ್ಲ. ಉದ್ದೇಶಪೂರ್ವಕವಾಗಿ ಇದೊಂದು ಟೈಮ್ ಬಾರ್ಡ ದಾವೆ ಹಾಕಿದೆ ಎಂದೆರ ಸರಿಯಲ್ಲ. ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ಅದು ನಕಲಿಯಾಗಿದ್ದರಿಂದ ಅದನ್ನು ಮಾಡಿಸಿಕೊಳ್ಳಿಲಿಲ್ಲಾ ಎಂದರೆ ಸರಿಯಲ್ಲ.

ಪ್ರತಿವಾದಿ ನಂ. 7 ರವರ ಪರ ವಕೀಲರು ಹಾಜರಿದ್ದು ಮೇಲಿನ ಪಾಟೀ ಸವಾಲನ್ನೇ ಅನುಮೋದಿಸಿರುತ್ತಾರೆ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿಯು ನುಡಿದಂತೆ ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.
ಸಹಿ/-
**ಹಿರಿಯ ವ್ಯವಹಾರ ನ್ಯಾಯಾಧೀಶರು,**
**ಕೊಪ್ಪಳ.**